ಯುಗಾದಿ ಪ್ರಬಂಧ ಸ್ಪರ್ಧೆ 2024

## ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಸುಧಾಕರ ದೇವಾಡಿಗ ಬಿ.

ಕಲೆ: ಸಂತೋಷ್ ಸಸಿಹಿತ್ಲು




ಕೆಲವು ಗೆಳೆಯರಂತೂ ನಿಮ್ಮಂತವರನ್ನು ನೋಡಿಯೇ ನಮ್ಮ ಇಲಾಖೆ ಕಿಲೋಮೀಟರ್‌ಗೆ ಎಪ್ಪತ್ತೈದು ಪೈಸೆ ಪ್ರಯಾಣಭತ್ಯೆ ನಿಗದಿಗೊಳಿಸಿರುವುದು ಎಂದು ಮುಖಕ್ಕೆ ಮಂಗಳಾರತಿ ಮಾಡಿದ್ದಾರೆ. ಇದ್ಯಾವುದೂ ನನ್ನೊಳಗಿನ ಬಯಕೆಯನ್ನು ಸಾಸಿವೆಯಷ್ಟು ಕುಂದಿಸಿಲ್ಲ. ಇನ್ನು ಹೆಚ್ಚು ಹೇಳಿದರೆ ಇದು ಆತ್ಮಕಥನವಾದೀತು ಎಂಬ ಭಯದಿಂದ ಇಲ್ಲಿಗೆ ನಿಲ್ಲಿಸುವೆ. ಇನ್ನು ನಿಲ್ದಾಣಗಳ ವಿಶ್ವರೂಪ ಅರಿಯುವ ಕಡೆ ಹೆಜ್ಜೆ ಹಾಕೋಣ.

ಸೂಜಿಗಲ್ಲಿನಂತೆ ಸೆಳೆಯುವ ಆಕರ್ಷಣೆಯಾದರೂ ನಿಲ್ದಾಣಗಳಲ್ಲಿ ಏನಿದೆಯೆಂದು ನೀವು ಯೋಚಿಸಬಹುದು. ನಿಲ್ದಾಣಗಳಲ್ಲಿ ಏನಿಲ್ಲ? ಅಲ್ಲಿ ಎಲ್ಲವೂ ಇದೆ. ಇದು ಕೃಷ್ಣನು ಕಾಣಿಸಿದ ಬ್ರಹ್ಮಾಂಡಕ್ಕಿಂತ ಮಿಗಿಲಾದುದು. ನಮ್ಮ ಸಮಾಜದ ಎಲ್ಲಾ ವರ್ಗದ, ಎಲ್ಲಾ ಧರ್ಮಗಳ ಜನರನ್ನು ಸೇರಿಸುವ ಜಾತ್ಯತೀತ ತಾಣವೇ ನಿಲ್ದಾಣ. ಬಹುಭಾಷೆ, ಬಹುಸಂಸ್ಕೃತಿಗಳನ್ನು ಏಕಕಾಲಕ್ಕೆ ಪ್ರದರ್ಶಿಸುವ ಅತ್ಯುತ್ತಮ ಸ್ಥಳ ಬೇರೆಲ್ಲೂ ಸಿಗಲಾರದು. ಇದು ನಮ್ಮ ನಿಲ್ದಾಣಗಳಲ್ಲಿ ಕಾಣಸಿಗುವ ಸಾಮಾನ್ಯ ದೃಶ್ಯವಾಗಿದೆ. ನುಡಿ, ಜಾತಿ, ಧರ್ಮ, ಸಂಸ್ಕೃತಿ, ಸಾಮರಸ್ಯಗಳ ಕುರಿತು ಅಧ್ಯಯನ ನಡೆಸುವ ತಜ್ಞರಿಗೆ ನಿಲ್ದಾಣಗಳಿಗಿಂತ ಪ್ರಶಸ್ತವಾದ ಮತ್ತೊಂದು ಜಾಗವಿಲ್ಲ.

ನಿಲ್ದಾಣಗಳೆಂದರೆ ಬಸ್ಸುಗಳು ಬಂದು ಹೋಗುವ, ಪಯಣಿಗರನ್ನು ಹೊತ್ತು ತರುವ, ಕರೆದೊಯ್ಯುವ ಜಡಕೇಂದ್ರಗಳಲ್ಲ. ನೀವು ಹಾಗೆ ಭಾವಿಸಿದ್ದರೆ ನಿಲ್ದಾಣಗಳ ಚೈತನ್ಯವನ್ನು, ಅದರೊಳಗಿನ ಜೀವಂತಿಕೆಯನ್ನು ಅಪಮಾನಿಸಿದಂತೆ. ನಿಲ್ದಾಣಗಳ ಜೀವಂತಿಕೆ ನಿಮಗೆ ತಿಳಿಯಬೇಕೆಂದರೆ ಕಣ್ಣಿದ್ದರೆ ಸಾಲದು. ನೋಡುವ ದೃಷ್ಟಿಯಿರಬೇಕು. ನಿಲ್ದಾಣದ ಮೂಲೆಯಲ್ಲಿ ನಿಂತು ಒಂದು ಗಂಟೆ ವೀಕ್ಷಿಸಿದರೆ ನಿಮ್ಮ ಅಭಿಪ್ರಾಯ ಬದಲಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ನಿಲ್ದಾಣವೇ ಒಂದು ಪುಟ್ಟ ಜಗತ್ತು. ವರ್ತಮಾನ ಪತ್ರಿಕೆ, ಹೊತ್ತಿಗೆಗಳ ಅಂಗಡಿ, ಬಿಸ್ಕತ್ತು, ಬಾಳೆಹಣ್ಣು, ನೀರು, ಪೆನ್ನು, ಹಲ್ಲುಜ್ಜುವ ಬ್ರಷ್, ಪೇಸ್ಟ್, ಸಾಬೂನು, ಮಕ್ಕಳ ಆಟಿಕೆ – ಹೀಗೆ ಸಕಲವೂ ಲಭಿಸುವ ಜನರಲ್ ಸ್ಟೋರ್‌ಗಳು ಅಲ್ಲಿವೆ. ಇದು ಇಂದಿನ ಯಾವ ಸೂಪರ್ ಮಾರ್ಕೆಟ್‌ಗಳಿಗೂ ಕಮ್ಮಿಯಿಲ್ಲ. ಮಾಲ್‌ಗಳು ನಿಲ್ದಾಣದ ಸವಕಲು ರೂಪಗಳು ಎಂಬುದರಲ್ಲಿ ಅನುಮಾನವಿಲ್ಲ. ಹಸಿವನ್ನು ನೀಗಿಸುವ ಹೋಟೆಲ್‌ಗಳು, ಮಜ್ಜನ, ಶೌಚ, ವಿಶ್ರಾಂತಿ ಕೇಂದ್ರಗಳನ್ನು ಕೆಲವು ನಿಲ್ದಾಣಗಳು ಹೊಂದಿವೆ. ಹೀಗೆ ಏನಿವೆ ಎಂದು ಪಟ್ಟಿ ಮಾಡುವುದಕ್ಕಿಂತ ಇಲ್ಲಿ ಏನಿಲ್ಲ ಎಂದು ಆಲೋಚಿಸುವುದೇ ಸುಲಭ.

ನನಗೀಗಲೂ ನಿಲ್ದಾಣವೆಂದರೆ ಬಸ್ಸು, ಗದ್ದಲ, ಜನರು, ಕಂಡಕ್ಟರ್, ಡ್ರೈವರ್, ತಿಂಡಿಗಳ ಪರಿಮಳ, ಕೂಲಿಗಳು, ಭಿಕ್ಷುಕರು, ಕುಡುಕರು – ಹೀಗೆ ಪುಟ್ಟ ಜಗತ್ತೊಂದು ನೆನಪಿನ ಪಟಲದಲ್ಲಿ ಅರಳಿಕೊಳ್ಳುತ್ತದೆ. ನಿಲ್ದಾಣಗಳು ಕಾಲೇಜು ಮಕ್ಕಳ ಕಾಯಂ ಅಡ್ಡೆಗಳಾಗಿವೆ. ಇವರಲ್ಲಿ ಅನೇಕರು ತಾವು ಮೆಚ್ಚಿದ ಲಲನೆಯರ ಬಸ್ಸು ಹೊರಡುವವರೆಗೆ ಅಲ್ಲಿಂದ ಕದಲುವುದಿಲ್ಲ. ಆ ಪರಿಯ ಧ್ಯಾನಸ್ಥರಿವರು. ಲಲನೆಯರು ಬಸ್ಸು ಹತ್ತಿದ ಮೇಲೆಯೆ ಇವರಿಗೆ ತಮ್ಮೂರಿನ ದಾರಿ ತೆರೆದುಕೊಳ್ಳುವುದು. ಬಸ್ಸು ಬರುವ, ಹೊರಡುವ ಮುಂಚಿನ ಅವಧಿಯು ಚುಟುಕು ಕ್ರಿಕೆಟ್‌ನ ಪವರ್‌ಪ್ಲೇ ಇದ್ದಂತೆ. ತಾನು ಮೆಚ್ಚಿದ ಹೆಣ್ಣನ್ನು ತನ್ನತ್ತ ಸೆಳೆಯಲು, ಮೆಚ್ಚಿಸಲು ಮಾಡುವ ಸಾಹಸಗಳು,